ಆ) ಪ್ರಸ್ತುತ ಜಿಂದಾಲ್ ಸ್ಟೀಲ್ ಕಂಪನಿಯವರು 10 ಮಿಲಿಯನ್ ಟನ್ ಸ್ಟೀಲ್ ಉತ್ಪಾದಿಸಲು ಸರ್ಕಾರ ನೀಡಿರುವ ಭೂಮಿ ಎಷ್ಟು;

ಇ) ಈ ಹಿಂದೆ ಜಮೀನಿನ್ನು ವಶಪಡಿಸಿಕೊಂಡಿರುವ ರೈತರ ಕುಟುಂಬದವರಿಗೆ ಉದ್ಯೋಗ ಮತ್ತು ಪರಿಹಾರ ಧನವನ್ನು ನೀಡಲಾಗಿದೆಯೇ;

ಶ್ರೀ ಮರುಗೇಶ್ ಆರ್. ನಿರಾಣಿ :– (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :–

ಅ) ಬಳ್ಳಾರಿಯ ಜಿಂದಾಲ್ ಸ್ಟೀಲ್ ಕಂಪನಿಗೆ ಸರ್ಕಾರದಿಂದ ಇಲ್ಲಿಯವರೆಗೆ 7742.26 ಎಕರೆ ಭೂಮಿಯನ್ನು ನೀಡಲಾಗಿರುತ್ತದೆ.

ಆ) ಈಗಾಗಲೆ ನೀಡಿರುವ ಜಮೀನಿನಲ್ಲೇ ಈ ಉತ್ಪಾದನೆ ನಡೆಯುತ್ತಿದೆ.

ಇ) ಸರ್ಕಾರವು ಭೂಮಿ ಕಳೆದುಕೊಂಡ ರೈತರ ಕುಟುಂಬದವರಿಗೆ ಪರಿಹಾರ ಧನವನ್ನು ನೀಡಿದೆ.

ಜಮೀನು ಕಳೆದುಕೊಂಡ 883 ರೈತರ ಪೈಕಿ 306 ಜನರಿಗೆ ಉದ್ಯೋಗ ನೀಡಲಾಗಿದೆ. ಉಳಿದ 577 ಜನರಿಗೆ ಸೂಕ್ತ ಉದ್ಯೋಗ ನೀಡಲು ಜಿಂದಾಲ್ ಕಾರ್ಖಾನೆ ಪರಿಗಣಿಸುತ್ತಿದೆ.

ನೆರೆ ಹಾವಳಿ ಹಾನಿ

78 (646) ಶ್ರೀ ಸಂಪಂಗಿ. ಎನ್. (ಬಾಗೇಪಲ್ಲಿ) :– ಕಂದಾಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ನೆರೆ ಹಾವಳಿಯಿಂದ ಹಾನಿಗೀಡಾದ ಎಷ್ಟು ಗ್ರಾಮಗಳನ್ನು ಸ್ಥಳಾಂತರಿಸಲು ತೀರ್ಮಾನಿಸಲಾಗಿದೆ. ಹಾಗೂ ಎಷ್ಟು ಗ್ರಾಮಗಳನ್ನು ಇದುವರೆಗೂ ಸಂಪೂರ್ಣವಾಗಿ ಸ್ಥಳಾಂತರಿಸಲಾಗಿದೆ;

ಆ) ಭಾಗಶಃ ಸ್ಥಳಾಂತರಿಸಲು ಎಷ್ಟು ಗ್ರಾಮಗಳನ್ನು ಗುರುತಿಸಲಾಗಿದೆ ಹಾಗೂ ಸ್ಥಳಾಂತರಿಸಿರುವ ಗ್ರಾಮಗಳ ಸಂಖ್ಯೆ: ಎಷ್ಟು;

ಇ) ಗ್ರಾಮಗಳ ಸ್ಥಳಾಂತರಕ್ಕಾಗಿ ಇದು ವರೆಗೂ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ; ಬಿಡುಗಡೆಯಾದ ಹಣದಲ್ಲಿ ಎಷ್ಟು ಖರ್ಚು ಮಾಡಲಾಗಿದೆ?

ಶ್ರೀ ಕರುಣಾಕರ ರೆಡ್ಡಿ :– (ಕಂದಾಯ ಸಚಿವರು) ;–

ಅ) 301 ಗ್ರಾಮಗಳನ್ನು ಸ್ಥಳಾಂತರಿಸಲು ತೀರ್ಮಾನಿಸಲಾಗಿದೆ. 201 ಗ್ರಾಮಗಳಲ್ಲಿ 21762 ಮನೆಗಳ ಕಾಮಗಾರಿ ಪ್ರಾರಂಭವಾಗಿರುತ್ತದೆ. ಕಾಮಗಾರಿಗಳು ವಿವಿಧ ಹಂತದಲ್ಲಿರುತ್ತವೆ. 997 ಮನೆಗಳು ಪೂರ್ಣಗೊಂಡಿರುತ್ತವೆ.

ಆ) 152 ಗ್ರಾಮಗಳನ್ನು ಭಾಗಶಃ ಸ್ಥಳಾಂತರಿಸಲು ತೀರ್ಮಾನಿಸಲಾಗಿದೆ. ಮನೆಕಟ್ಟುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಇ) ಗ್ರಾಮಗಳ ಸ್ಥಳಾಂತರಕ್ಕೆ ಭೂಮಿ ಖರೀದಿಗಾಗಿ ರೂ.155–00 ಕೋಟಿ ಬಿಡುಗಡೆ ಮಾಡಲಾಗಿದೆ; ಬಿಡುಗಡೆ ಮಾಡಿದ್ದು, ಈ ಪೈಕಿ ರೂ. 111.79 ಕೋಟಿ ವೆಚ್ಚ ಮಾಡಲಾಗಿದೆ. ಹಾಗೂ ಮನೆಕಟ್ಟಲು ಮತ್ತು ಮೂಲಭೂತ ಸೌಲಭ್ಯ ಒದಗಿಸಲು ರೂ. 92.58 ಕೋಟಿ ಬಿಡುಗಡೆ ಮಾಡಿದೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ವರಣಾ ನಾಲೆಯಲ್ಲಿ ನೀರಾವರಿ

79 (525) ಶ್ರೀ ಸತ್ಯನಾರಾಯಣ ಎಂ. (ಚಾಮುಂಡೇಶ್ವರ) :– ಜಲಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ವರುಣಾ ನಾಲೆಯಿಂದ ಎಷ್ಟು ಎಕರೆಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಮಾಡಲಾಗುತ್ತಿದೆ?

ಆ) ವರುಣಾ ನಾಲೆಯಿಂದ ನಾಲೆಯ ಕೊನೆಯ ಭಾಗದ ಶೇ.35 ರಷ್ಟು ಅಚ್ಚುಕಟ್ಟು ಪ್ರದೇಶಗಳಿಗೆ ನೀರಾವರಿ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ, ಬಂದಿದ್ದಲ್ಲಿ ಈ ಬಗ್ಗೆ ಯಾವ ಕ್ರಮಕೈಗೊಳ್ಳಲಾಗಿದೆ? (ಮಾಹಿತಿಯನ್ನು ನೀಡುವುದು)

ಇ) ವರುಣಾ ನಾಲೆಯ ಅಭಿವೃದ್ಧಿ/ದುರಸ್ತಿಗಾಗಿ 2010–11ನೇ ಸಾಲಿನಲ್ಲಿ ಎಷ್ಟು ಅನುದಾನವನ್ನು ಮೀಸಲಾಗಿರಿಸಲಾಗಿದೆ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :–

ಅ) ವರುಣಾ ನಾಲೆಯಿಂದ 976 ಎಕರೆ (395 ಹೆ) ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿಗಾಗಿ ಹಾಗೂ 77456 ಎಕರೆ (31346 ಹೆ) ಪ್ರದೇಶಕ್ಕೆ ಪ್ರಾಯೋಗಿಕವಾಗಿ ನೀರು ಹರಿಸಲಾಗುತ್ತಿದೆ.

ಆ) 2000–01 ರ ನಂತರ ಹಂತ ಹಂತವಾಗಿ ನೀರಾವರಿ ಸಾಮರ್ಥ್ಯ